**P.W-1**

ದಿನಾಂಕಃ 06-02-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರ ಶ್ರೀಮತಿ ವೈ ವಿಡಿ ವಕೀಲರಿಂದಃ

1. ಅಪಘಾತ ಓಮಿನಿ ಮತ್ತು ಕೆ ಎಸ್ ಆರ್ ಟಿ ಸಿ ಬಸ್ ನಡುವೆ ಆಗಿರುತ್ತದೆ. ನಾನು ಓಮಿನಿಯಲ್ಲಿ ಹೋಗುತ್ತಿದ್ದೆನು. ಅಪಘಾತ ಆದಾಗ ಮಧ್ಯಾಹ್ನ 12 ಗಂಟೆಯಾಗಿತ್ತು. ದಿಃ 11-04-2024 ರಂದು ಅಪಘಾತ ಆಗಿರುತ್ತದೆ. ನಾನು ಓಮಿನಿಯಲ್ಲಿ ಹಿಂದಿನ ಸೀಟ್ ನಲ್ಲಿ ಕುಳಿತಿದ್ದೆನು. ನಾನು ಹಿಂದಿನ ಸೀಟ್ ನಲ್ಲಿ ಕುಳಿತಿದ್ದರೂ ಸಹ ಎದುರಿನಿಂದ ಬರುತ್ತಿದ್ದ ವಾಹನಗಳು ಕಾಣಿಸುತ್ತಿದ್ದವು. ನಮ್ಮ ಕಾರಿನ ಚಾಲಕ ಸಾಧಾರಣ ವೇಗದಲ್ಲಿ ಹೋಗುತ್ತಿದ್ದನು. ಎದುರುರಿನಿಂದ ಕೆ ಎಸ್ ಆರ್ ಟಿ ಸಿ ಬಸ್ ಬಂದು ಡಿಕ್ಕಿ ಪಡಿಸಿರುತ್ತದೆ. ನಮ್ಮ ಕಾರಿನ ಚಾಲಕ ಮುಂದೆ ಹೋಗುತ್ತಿದ್ದ ವಾಹನವನ್ನು ಓವರ್ ಟೇಕ್ ಮಾಡಲು ಹೋಗಿ ಬಸ್ ಗೆ ಡಿಕ್ಕಿ ಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಕೆ ಎಸ್ ಆರ್ ಟಿ ಸಿ ಬಸ್ ಚಾಲಕ ರಸ್ತೆಯ ಎಡಭಾಗದಲ್ಲಿ ಹೋಗುತ್ತಿದ್ದರುೂ ಸಹ ನಮ್ಮ ಚಾಲಕನೇ ವಾಹನ ಓವರಟೇಕ್ ಮಾಡಲು ಹೋಗಿ ಬಸ್ ಗೆ ಡಿಕ್ಕಿ ಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಈ ಅಪಘಾತ ಓಮಿನಿ ಚಾಲಕನ ತಪ್ಪಿನಿಂದ ಆಗಿರುವುದರಿಂದ ಕೆ ಎಸ್ ಆರ್ ಟಿ ಸಿ ಬಸ ನವರು ಯಾವುದೆ ಪರಿಹಾರ ಕೊಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ.

2. ಓಮಿನಿ ಯನ್ನು ನನ್ನ ಮಾವನ ಮಗ ದೇವರಾಜ ನಡೆಸುತ್ತಿದ್ದನು. ಆತನು ಸಹ ಅಪಘಾತದಲ್ಲಿ ಮೃತ ಪಟ್ಟಿರುತ್ತಾನೆ. ಆತನಿಗೆ ಡಿ ಎಲ್ ಇತ್ತು. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಓಮಿನಿಗೆ ಯಾವ ಕಂಪನಿಯಲ್ಲಿ ಇನ್ಸುರೆನ್ಸ ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ಓಮಿನಿ ಚಾಲಕ ಜೋರಾಗಿ ಹೋಗಿ ಕೆ ಎಸ್ ಆರ್ ಟಿ ಸಿ ಬಸ್ ಗೆ ಡಿಕ್ಕಿ ಪಡಿಸಿದ್ದರಿಂದ ಈ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಬಲಗಾಲಿನ ಮಂಡಿಯ ಕಳೆಗೆ ಆಪರೇಶನ್ ಮಾಡಿ ರಾಡ್ ಹಾಕಿರುತ್ತಾರೆ. ಸೊಂಟಕ್ಕೂ ಸಹ ಪೆಟ್ಟಾಗಿತ್ತು. ಸೊಂಟದ ಮೂಳೆಗೆ ಹಾನಿಯಾಗಿದ್ದು, ಆಪರೇಶನ ಮಾಡಿ ಸೊಂಟದ ಮೂಳೆ ಜೋಡಣೆ ಮಾಡಿರುತ್ತಾರೆ. ಬಲ ಭುಜದ ಮೂಳೆ ಮುರಿತ ಆಗಿರುತ್ತದೆ. ಆಪರೇಶನ್ ಮಾಡಿ ಜೋಡಿಸಿರುತ್ತಾರೆ.

3. ಅಪಘಾತ ಆದ ತಕ್ಷಣ ನಮ್ಮನ್ನು ನಂಜಪ್ಪ ಆಸ್ಪತ್ರೆ ಗೆ ಕರೆದುಕೊಂಡು ಹೋಗಿರುತ್ತಾರೆ ಅಲ್ಲಿಂದ ಮಣಿಪಾಲ್ ಕಸ್ತೂರ ಬಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂಜಪ್ಪ ಆಸ್ಪತ್ರೆಯಲ್ಲಿ

3-4 ಗಂಟೆ ಮಾತ್ರ ಇದ್ದೆನು. ಅಲ್ಲಿಂದ ಅವತ್ತೆ ಕಸ್ತೂರ ಬಾ ಆಸ್ಪತ್ರೆಗೆ ಹೋಗಿರುತ್ತೇವೆ. ಅಲ್ಲಿ 1 ತಿಂಗಳು ಒಳರೋಗಿಯಾಗಿದ್ದೆನು. ನಂತರ 2 ನೇ ಬಾರಿಗೆ ಆಸ್ಪತ್ರೆಗೆ ದಾಖಲಾದಾಗ 15 ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನನ್ನ ಕಾಲು ಮಡಿಚಲು ಆಗುತ್ತಿರಲಿಲ್ಲ ಹಾಗಾಗಿ 2 ನೇ ಬಾರಿ ಆಸ್ಪತ್ರೆಗೆ ದಾಖಲಾಗಿರುತ್ತೇನೆ. 2 ನೇ ಬಾರಿಗೆ ದಾಖಲಾದಾಗ ಫಿಜಿಯೋ ತೆರಪಿ ಮಾಡಿಸಿರುತ್ತಾರೆ. ಕೊನೆಯ ಬಾರಿಗೆ ಯಾವಾಗ ಆಸ್ಪತ್ರೆಯಿಂದ ಡಿಸ್ಚಾರ್ಜ ಆಗಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ. ಮಣಿಪಾಲ್ ಆಸ್ಪತ್ರೆಯಿಂದ ಡಿಸ್ಚಾರ್ಜ ಆಗಿ ಬಂದ ನಂತರ ಬೇರೆ ಎಲ್ಲೂ ಸಹ ಒಳರೋಗಿಯಾಗಿ ದಾಖಲಾಗಿರುವುದಿಲ್ಲ, ಸಾಕ್ಷಿ ಮುಂದುವರೆದು ಎಸ್ ಎಸ್ ಐ ಆಸ್ಪತ್ರೆಯಲ್ಲಿ ತೋರಿಸಿಕೊಂಡು ಬರುತ್ತಿದ್ದೆ ಎಂದು ಹೇಳುತ್ತಾರೆ. ಎಸ್ ಎಸ್ ಐ ಆಸ್ಪತ್ರೆ ಯಲ್ಲಿ ಕೇವಲ ಅಂಗನ್ಯೂನ್ಯತೆ ಪ್ರಮಾಣ ಪತ್ರ ಪಡೆಯಲು ಹೋಗಿರುತ್ತೇನೆಯೇ ಹೊರತು ಚಿಕಿತ್ಸೆ ಪಡೆಯಲು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಎಸ್ ಎಸ್ ಐ ಆಸ್ಪತ್ರೆಯಲ್ಲಿ ನಿತಿನ್ ಎ ಬಿ ಅವರಿಂದ ಚಿಕಿತ್ಸೆಪಡೆದಿರುತ್ತೇನೆ. ಎಸ್ ಎಸ್ ಐ ಆಸ್ಪತ್ರೆಯಲ್ಲಿ ಎಕ್ಸರೆ , ಸ್ಕ್ಯಾನಿಂಗ್ ಮಾತ್ರೆ, ಇಂಜೆಕ್ಷನ್ ಕೊಟ್ಟಿರುತ್ತಾರೆ. ಎಸ್ ಎಸ್ ಐ ಆಸ್ಪತ್ರೆಯಲ್ಲಿ ಕೇವಲ ಅಂಗನ್ಯೂನ್ಯತೆ ಮಾತ್ರ ಪಡೆಯಲು ಹೋಗಿದ್ದೆ ಎಂದರೆ ಸರಿಯಲ್ಲ. ನಾನು ಈಗ ಸಂಪೂರ್ಣ ಗುಣಮುಖವಾಗಿದ್ದು, ದಿನನಿತ್ಯದ ಕೆಲಸ ಮಾಡಲು ಯಾವುದೆ ತೊಂದರೆ ಇಲ್ಲ ಎಂದರೆ ಸರಿಯಲ್ಲ.

4. ನಾನು ಡಿಪ್ಲೋಮಾ ಮಾಡಿದ್ದೆ. ನನ್ನ ಗಂಡ ಎಲ್ಲಿಯೂ ಕೆಲಸಕ್ಕೆ ಕಳುಹಿಸುತ್ತಿರಲಿಲ್ಲ, ಮನೆಯಲ್ಲಿಯೇ ಟೈಲರಿಂಗ್ ಕೆಲಸ ಮಾಡುತ್ತಿದ್ದೆ. ನನ್ನ ಗಂಡ ಬೋರ್ ವೆಲ್ ಎಜೆನ್ಸಿ ಮಾಡುತ್ತಾರೆ. ಮದುವೆಯಾದಾಗಿನಿಂದ ನನ್ನ ಗಂಡನೇ ನನ್ನ ಬೇಕು ಬೇಡಗಳನ್ನು ನೋಡಿಕೊಳ್ಳುತ್ತಾನೆ ಎಂದರೆ ಸರಿ. ಆದರೂ ಸಹ ಟೈಲರಿಂಗ್ ಕೆಲಸದಿಂದ ತಿಂಗಳಿಗೆ ರೂ. 30 ಸಾವಿರ ಗಳಿಸುತ್ತಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಟೈಲರಿಂಗ್ ಕಲಿತ ಬಗ್ಗೆ ಯಾವುದೆ ಸರ್ಟಿಫಿಕೇಟ್ ಇರುವುದಿಲ್ಲ. ಟೈಲರಿಂಗ್ ಮಶಿನ್ ಯಾವುದು ಎಂದು ನನಗೆ ಗೊತ್ತಿರುವುದಿಲ್ಲ. ತಿಂಗಳಿಗೆ ರೂ.30 ಸಾವಿರ ಇದ್ದ ಬಗ್ಗೆ ಯಾವುದೆ ದಾಖಲೆ ಹಾಜರುಪಡಿಸಿರುವುದಿಲ್ಲ. ನಾನು ಯಾವದೆ ಕೆಲಸ ಮಾಡದೆ ಇದ್ದರೂ ಸಹ ಟೈಲರಿಂಗ್ ಕೆಲಸ ಮಾಡುತ್ತಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಆರ್ಥಿಕ ಮಾನಸಿಕ, ದೈಹಿಕವಾಗಿ ಯಾವುದೆ ಕೆಲಸ ಮಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೆ ತೊಂದರೆ ಇಲ್ಲದೆ ಇದ್ದರೂ ಸಹ ತೊಂದರೆ ಇದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಮೊದಲು ನನ್ನ ಗಂಡನೇ ಎಲ್ಲವನ್ನು ನೋಡಿಕೊಳ್ಳುತ್ತಿದ್ದ ಈಗಲೂ ಸಹ ಅವರೆ ಎಲ್ಲವನ್ನು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ.

5. ನನ್ನ ಸ್ಕೂಲ್ ದಾಖಲೆಯಲ್ಲಿ ದಿಃ 15-01-1991 ನನ್ನ ಜನ್ಮ ದಿನಾಂಕ ಆಗಿರುತ್ತದೆ. ಅಪಘಾತ ಸಮಯದಲ್ಲಿ ನನಗೆ 37 ವರ್ಷ ವಯಸ್ಸಾಗಿತ್ತು ಎಂದರೆ ಸಾಕ್ಷಿ 32 ಆಗಿತ್ತು ಎಂದು ಹೇಳುತ್ತಾರೆ. ನನ್ನ ಶಾಲಾ ದಾಖಲಾತಿ ಹಾಜರು ಪಡಿಸಲು ಯಾವುದೆ ತೊಂದರೆ ಇರುವುದಿಲ್ಲ. ನನ್ನ ವಯಸ್ಸು 36 ವರ್ಷ ಆಗಿರುವುದರಿಂದ ನಾನು ಅದನ್ನು ಉದ್ದೇಶ ಪೂರ್ವಕವಾಗಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

6. ನನಗೆ ಯಾವುದೆ ಅಂಗನ್ಯೂನ್ಯತೆ ಇಲ್ಲದೆ ಇದ್ದರೂ ಸಹ ಸುಳ್ಳು ಅಂಗನ್ಯೂನ್ಯತೆ ಪ್ರಮಾಣ ಪತ್ರ ತಂದು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಯಾವುದೆ ಅಂಗನ್ಯೂನ್ಯತೆ ಇಲ್ಲದೆ ಇದ್ದರೂ ಸಹ ಶೇ 60 ರಷ್ಟು ಅಂಗನ್ಯೂನ್ಯತೆ ಇದೆ ಎಂದು ಸುಳ್ಳು ಪ್ರಮಾಣ ಪತ್ರ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿದ ಮೆಡಿಕಲ್ ಬಿಲ್ ಗಳಿಗೂ ನನಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಚಿಕಿತ್ಸೆಗಾಗಿ ರೂ .3,50,000/- ಖರ್ಚು ಮಾಡಿದ್ದು ಮತ್ತು ಹೆಚ್ಚಿನ ಚಿಕಿತ್ಸೆಗಾಗಿ ರೂ.2,40,000/- ಬೇಕು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಅಪಘಾತ ಸಂಪೂರ್ಣವಾಗಿ ಓಮಿನಿ ಚಾಲಕನ ತಪ್ಪಿನಿಂದ ಆಗಿದೆ ಎಂದು ಗೊತ್ತಿದ್ದರುೂ ಸಹ ಮಾನ್ಯ ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಓಮಿನಿಯಲ್ಲಿ ನಿಗದಿ ಪಡಿಸಿದಕ್ಕಿಂತ ಹೆಚ್ಚಿನ ಜನರು ಪ್ರಯಾಣಿಸುತ್ತಿದ್ದರಿಂದ 2 ನೇ ಎದುರುದಾರರು ಯಾವುದೆ ಪರಿಹಾರ ಕೊಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/-

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.